**ಕರ್ನಾಟಕ ರಕ್ಷಣಾ ವೇದಿಕೆ**

# ಕಾವೇರಿ ಹೋರಾಟ – ಸಾವಿರಾರು ಕನ್ನಡಿಗರಿಂದ ದೆಹಲಿ ಮುತ್ತಿಗೆ

ಪ್ರೀತಿಯ ಕನ್ನಡ ಬಂಧು,

ಕನ್ನಡಿಗರ ಬದುಕಿನ ಚರಮ ಗೀತೆ ಹಾಡಿದಂತೆ ಇರುವ 'ಕಾವೇರಿ ನ್ಯಾಯಾಧಿಕರಣ'ದ ಅಂತಿಮ ತೀರ್ಪು ನಿರೀಕ್ಷೆಯಂತೆ ನಿರಾಶಾದಾಯಕವಾಗೇ ಇದೆ. ಕನ್ನಡಿಗರ ಹಿತ ಕಾಪಾಡುವಲ್ಲಿ ಸೋತಿರುವ ನಮ್ಮ ಜನಪ್ರತಿನಿಧಿಗಳ ಸೋಗಲಾಡಿತನ, ಕೇಂದ್ರ ಸರ್ಕಾರದ ಕನ್ನಡ ವಿರೋಧಿ ಧೋರಣೆಗಳು ಒಂದೇ ಸಮಯದಲ್ಲಿ ಬಯಲಾಗಿದೆ. ಇಂತಹ ತೀರ್ಪು ಬರಲಿದೆ ಎನ್ನುವ ಸುಳಿವು ಕರ್ನಾಟಕ ರಾಜ್ಯದ ಎಲ್ಲೆಡೆ ತೀರ್ಪಿಗೂ ಮುನ್ನ ಏರ್ಪಡಿಸಿದ ಬಿಗಿ ಪೋಲೀಸ್ ಭದ್ರತೆಯನ್ನು ಕಂಡಾಗ, ಜೊತೆಗೆ ಸಂಭ್ರಮಾಚರಣೆಗೆ ಸಿದ್ಧವಾದ ನೆರೆಯ ತಮಿಳುನಾಡನ್ನು ಕಂಡಾಗಲೇ ಅನ್ನಿಸಿತ್ತು. ತೀರ್ಪು ಪ್ರಕಟವಾದ ಅರ್ಧ ಘಂಟೆಯ ಒಳಗಾಗಿ **ಕರ್ನಾಟಕ ರಕ್ಷಣಾ ವೇದಿಕೆ**ಯ ಸಾವಿರಾರು ಕಾರ್ಯಕರ್ತರು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಬೀದಿಗಿಳಿದು ತೀವ್ರ ಪ್ರತಿಭಟನೆಗೆ ತೊಡಗಿದರು.

ಕೇಂದ್ರ ಸರ್ಕಾರದ ಧೋರಣೆಯನ್ನು ಖಂಡಿಸಿ ಫೆಬ್ರವರಿ 12ರಂದು **ಕರ್ನಾಟಕ ಬಂದ್** ಆಚರಿಸಲಾಯಿತು. ಕಾವೇರಿ ಕಣಿವೆಯ ಊರುಗಳಷ್ಟೇ ಅಲ್ಲದೆ ರಾಜ್ಯದ ಉತ್ತರ ಭಾಗದ ಬೆಳಗಾವಿ, ಬಳ್ಳಾರಿ, ರಾಯಚೂರು ಸೇರಿದಂತೆ ಎಲ್ಲ ಜಿಲ್ಲೆಗಳೂ ಇದೇ ಮೊದಲ ಬಾರಿಗೆ ಸ್ಪಂದಿಸಿದವು. ಕರ್ನಾಟಕದ ಉದ್ದಗಲಕ್ಕೂ ಇರುವ ಕನ್ನಡಿಗರೆಲ್ಲಾ ಒಂದೇ ಎನ್ನುವ ಭಾವನಾತ್ಮಕ ಬೆಸುಗೆಗೆ ಕರ್ನಾಟಕ ರಕ್ಷಣಾ ವೇದಿಕೆ ಕಾರಣವಾಯಿತು.

ತೀರ್ಪಿನ ವಿರುದ್ಧ ದನಿಯೆತ್ತದ ಸಂಸದರ ಕುರಿತನವನ್ನು ವೇದಿಕೆ ಪ್ರತಿಬಿಂಬಿಸಿ ಪ್ರತಿಭಟಿಸಿ ಎಲ್ಲ ಸಂಸದರ ಮೇಲೆ ತೀವ್ರ ಒತ್ತಡ ಹೇರಲಾಯಿತು. ಕರ್ನಾಟಕದಿಂದ ಆಯ್ಕೆಯಾದ ಕನ್ನಡಿಗರಲ್ಲದ ರಾಜ್ಯಸಭಾ ಸಂಸದರ ವಿರುದ್ಧ ಜನ ಜಾಗೃತಿ ಮೂಡಿಸಲಾಯಿತು. ಇದಕ್ಕೆ ಕಲಶವಿಟ್ಟಂತೆ ಕರ್ನಾಟಕ ರಕ್ಷಣಾ ವೇದಿಕೆಯ ಎರಡು ಸಾವಿರ ಕಾರ್ಯಕರ್ತರು ದೆಹಲಿಯ ಜಂತರ್ ಮಂತರ್ ಬಳಿ ಸಂಸತ್ ಭವನದ ಎದುರು ಪ್ರತಿಭಟನೆ ನಡೆಸಿ ಕನ್ನಡದ ಕಹಳೆಯನ್ನು ಊದಿದರು. ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿಯಾದ ಮೊದಲ ಕನ್ನಡಿಗರ ಪ್ರತಿನಿಧಿಯಾದದ್ದು **ಕರ್ನಾಟಕ ರಕ್ಷಣಾ ವೇದಿಕೆ.**

ಇಡಿಯ ಚಳವಳಿಯ ಕಾವನ್ನು ಆರದಂತೆ ಕಾಪಾಡಿಕೊಂಡು ಬರುತ್ತಿದ್ದು ಕಾವೇರಿ ಕಣಿವೆಯ ಲಕ್ಷಾಂತರ ರೈತರ ಹೋರಾಟಕ್ಕೆ ಸ್ಪಂದಿಸುತ್ತಾ ಮುಂದೆ ಸಾಗಿದ್ದೇವೆ. ಕಾವೇರಿ ಉಗಮ ಸ್ಥಾನವಾದ ತಲಕಾವೇರಿಯಿಂದ ಬೆಂಗಳೂರಿನ ತನಕ ಕಾವೇರಿ ಕಣಿವೆಯ ಎಲ್ಲ ಜಿಲ್ಲೆಗಳಲ್ಲಿ ಮಾರ್ಚ್ 27ರಿಂದ **ಕಾವೇರಿ ರಥಯಾತ್ರೆ**ಯನ್ನು ಹಮ್ಮಿಕೊಳ್ಳಲಾಗಿದೆ. ಇದರ ಉದ್ದೇಶ ಈ ತೀರ್ಪಿನಿಂದ ತತ್ತರಿಸಿರುವ ರೈತ ಬಾಂಧವರಲ್ಲಿ ಭರವಸೆ ತುಂಬಿ ಮುಂದಿನ ದಿನಗಳ ತೀವ್ರ ಹೋರಾಟಕ್ಕೆ ಸಜ್ಜಾಗಲು ಕಸುವು ತುಂಬುವುದೇ ಆಗಿದೆ. ಈ ಯಾತ್ರೆ 31ನೇ ತಾರೀಕಿನಂದು ಬೆಂಗಳೂರಿನ ಮಲ್ಲೇಶ್ವರದ ಆಟದ ಮೈದಾನದಲ್ಲಿ ಭಾರೀ ಬಹಿರಂಗ ಸಭೆಯಾಗಿ ಕೊನೆಯಾಗುತ್ತದೆ.

ಇದೇ ಸಂಬಂಧವಾಗಿ ಬರುವ ಮೇ ತಿಂಗಳ 4ರಂದು ನಾಡಿನ ಲಕ್ಷಾಂತರ ಕನ್ನಡಿಗರು ದೆಹಲಿ ಮುತ್ತಿಗೆ ಹಾಕುವ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗಿದೆ. ರಾಜ್ಯದ ಮೂಲೆ ಮೂಲೆಗಳಿಂದ ಎಪ್ರಿಲ್ 26ರಿಂದಲೇ ದೆಹಲಿಗೆ ಕನ್ನಡಿಗರ ಪಡೆ ಹೊರಡಲಿವೆ. ಅಲ್ಲಿ ಸಂಸತ್ ಭವನದ ಬಳಿ ಬೀದಿ ಬೀದಿಗಳಲ್ಲಿ ಕನ್ನಡದ ಹಳದಿ ಕೆಂಪು ಬಾವುಟ ಹಾರಾಡಲಿದೆ. ಕನ್ನಡಿಗರ ಮೇಲೆ ನಿರಂತರವಾಗಿ ನಡೆಸಲಾಗುತ್ತಿರುವ ಅನ್ಯಾಯದ ಸರಪಳಿಯನ್ನು ಮುರಿದು ನ್ಯಾಯ ಒದಗಿಸಿಕೊಡುವುದು ಕೇಂದ್ರ ಸರ್ಕಾರಕ್ಕೆ ಅನಿವಾರ್ಯವೆಂಬ ಎಚ್ಚರಿಕೆಯನ್ನು ನೀಡಲು ಈ ಹೋರಾಟವನ್ನು ಹಮ್ಮಿಕೊಳ್ಳಲಾಗಿದೆ.

ಬಂಧುಗಳೇ, ಕನ್ನಡಿಗರ ಅಳಿವು ಉಳಿವಿನ ಸಮಸ್ಯೆಯಾಗಿರುವ ಕಾವೇರಿ ಹೋರಾಟದಲ್ಲಿ ನಿಮ್ಮೆಲ್ಲರ ಕೈಜೋಡಿಸುವಿಕೆ ಅತ್ಯಂತ ಅಗತ್ಯವಾಗಿದೆ. ಈ ಹೋರಾಟದಲ್ಲಿ ಎಲ್ಲ ಕನ್ನಡಿಗರೂ ಭಾಗವಹಿಸಬೇಕೆಂದೂ ಈ ಮೂಲಕ ಕಳಕಳಿಯಿಂದ ಕೋರುತ್ತೇನೆ.

ನಿಮ್ಮ ಪ್ರೀತಿಯ ಕನ್ನಡ ಸೇವಕ
ಟಿ. ಎ. ನಾರಾಯಣ ಗೌಡ